ಇನ್ನು ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ಅಚ್ಚು ತೆಗೆಯುವ ಕೆಲಸ. ಇದಕ್ಕಾಗಿ ನನ್ನನ್ನು ನೆಲದಲ್ಲಿ ಮಲಗಿಸಿ, ಮುಖದ ತುಂಬ ಪ್ಲಾಸ್ಟರ್ ಹಚ್ಚಿ ಕದಲದ ಹಾಗೆ ಸ್ಥಿರವಾಗಿರುವಂತೆ ಹೇಳಿದರು. ಮುಖದ ತುಂಬ ಕೀಳಲಾರದ ಕವಚವನ್ನು ಹೊತ್ತಿದ್ದ ನನ್ನ ಮೇಲೆ ಮತ್ತೆ ದಾಳಿಯಾಗಿತ್ತು. ಆ ಆಕ್ರಮಣವನ್ನು ನಾನು ದಾಳಿ ಎಂದು ಹೇಳುವಹಾಗಿಲ್ಲ. ಕಾರಣ ಆ ವಯಸ್ಸಿನಲ್ಲಿ ಆ ಸುಖವನ್ನು ಸ್ವೀಕರಿಸಿದ್ದೆ. ಅದನ್ನು ನಿರಾಕರಿಸುವ ಅಗತ್ಯ ಕಾಣಲಿಲ್ಲ. ಆದರೆ ಪ್ಲಾಸ್ಟರ್ ಆಫ್ ಪ್ಯಾರಿಸ್ ಕಣ್ಣುಗಳನ್ನು ಮುಚ್ಚಿದ್ದರಿಂದ ನನ್ನನ್ನು ಸೇರಿದ್ದು ಆ ತಂಡದ ಯಾರ ವೀರ್ಯ ಎಂದೂ ತಿಳಿಯುವುದು ಕಷ್ಟವೆ. ಒಟ್ಟಿನಲ್ಲಿ ಆ ತಂಡದ ಯಾರು ನನ್ನ ಗರ್ಭಕ್ಕೆ ಕಾರಣರಾದರು ಎಂದು ಇಂದಿಗೂ ನಾನು ಹೇಳಲಾರೆ. ಹಾಗಾಗಿ ನಿಮ್ಮ ತಂದೆಯ ತಂದೆ ಯಾರೆಂದು ನನಗೆ ತಿಳಿಯದು!

ಆದರೆ ನನಗೊದಗಿದ ಸ್ಥಿತಿ ಆಕಸ್ಮಿಕ ಅಲ್ಲ, ಅದೆಲ್ಲವೂ ಈ ಜರ್ಮನ್ನರ ಪೂರ್ವಯೋಜಿತ ಕ್ರಮ, ಆರ್ಯ ರಕ್ತವನ್ನು ಜರ್ಮನಿಗೆ ಒಯ್ಯುವ ಷಡ್ಯಂತ್ರದ ಒಂದು ಭಾಗ ಎಂದು ನನಗಾಗ ತಿಳಿದಿರಲಿಲ್ಲ. ಅವರ ಯೋಜನೆ ಸಂಪೂರ್ಣವಾಗಿ ಕೈಗೂಡಿದ್ದಿದ್ದರೆ ನೀನು ಹುಟ್ಟುತ್ತಿರಲಿಲ್ಲ. ಹೇಗೆ ಎಂದು ಹೇಳುವ ಮುನ್ನ ಕೆಲವು ಘಟನೆಗಳನ್ನು ತಿಳಿಸಬೇಕಾಗುತ್ತದೆ.

ನನ್ನ ಅಳತೆಗಳನ್ನೆಲ್ಲ ಪಡೆದ ಮೇಲೆ ಅವರು ಹಲವಾರು ಸೂಚನೆಗಳನ್ನು ನೀಡಿದರು. ನನ್ನೊಂದಿಗೆ ನಡೆದ ದೇಹ ಸಂಬಂಧಕ್ಕೆ ಅವರು ಬೇಸರ ಪಡುತ್ತಿದ್ದಾರೆ ಎಂದೂ, ನನಗೊದಗಬಹುದಾದ ಸಂದಿಗ್ಧದಿಂದ ಪಾರುಮಾಡಲು ಈಗಾಗಲೆ ಅವರು ಒಂದು ಸೂಕ್ತ ಪರಿಹಾರವನ್ನು ಯೋಚಿಸಿರುವರೆಂದೂ, ನಾನು ಯಾರಿಗೂ ತಿಳಿಸದೆ ಅವರು ಹೇಳುವ ಸ್ಥಳಕ್ಕೆ ಬಂದರೆ ನೆರವಿಗೆ ನಿಂತು ನನ್ನ ಬದುಕಿಗೆ ಆಸರೆ ನೀಡುವರೆಂದೂ ತಿಳಿಸಿದರು. ನನಗೆ ಸೂಚಿಸಿದ್ದ ಸ್ಥಳದಲ್ಲಿ ಅವರ ಕಡೆಯ ಜನರು ಕಾದಿರುತ್ತಾರೆ ಎಂದು ತಿಳಿಸಿ ಅದಕ್ಕೆ ಬೇಕಾದ ಖರ್ಚು ವೆಚ್ಚವನ್ನು, ನಾನು ಹೋಗಬೇಕಿರುವ ಹಾದಿಯನ್ನೂ, ವಿವರಗಳನ್ನೂ ನೀಡಿ ಯಾವುದಕ್ಕೂ ಯೋಚಿಸಬಾರದೆಂದು ಸಂಭಾಳಿಸಿ ಹೇಳಿ ಹೊರಡಲು ಅನುವಾದರು. ಆಗ ತಮ್ಮ ಜೊತೆಯಲ್ಲಿಯೆ ಏಕೆ ಕರೆದೊಯ್ಯಬಾರದೆಂದು ಕೇಳಿದೆ. 'ನಾವು ಪಾಶ್ಚಿಮಾತ್ಯರು; ನಮಗೆ ಮಾತ್ರ ಗಡಿಗಳನ್ನು ದಾಟಲು, ಓಡಾಡಲು ಅನುಮತಿ ನೀಡಲಾಗಿದೆ. ನಮ್ಮ ಜೊತೆ ನಿನ್ನನ್ನು ಕರೆದೊಯ್ದರೆ ಭಾರತದ ಗಡಿಯಲ್ಲಿ ನಮ್ಮನ್ನು ಬಂಧಿಸುತ್ತಾರೆ. ಆಗ ನಾವು ನಿನ್ನ ಸಹಾಯಕ್ಕೆ ಬರಲಾಗದು. ಬದಲಿಗೆ ನೀನು ಏಷ್ಯಾಕ್ಕೆ ಸೇರಿದ ದೇಶದವಳಾಗಿರುವುದರಿಂದ, ಟಿಬೆಟ್‌ನಿಂದ ಭಾರತಕ್ಕೆ ನೀನಾಗಿಯೆ ಸುಲಭವಾಗಿ ಸಾಗಬಹುದು' ಎಂದು ಉತ್ತರಿಸಿ ಒಪ್ಪಿಸಿದರು.

ಅವರು ಜರ್ಮನಿಗೆ ಹಿಂದಿರುಗಿದ ಬೆನ್ನಲ್ಲಿಯೆ ಇಡೀ ತಂಡವನ್ನು **SS Skull**ನ ಪ್ರಶಸ್ತಿ ಕೊಟ್ಟು ಗೌರವಿಸಲಾಯಿತು ಎಂದು ಎಷ್ಟೋ ವರ್ಷಗಳ ನಂತರ ನನಗೆ ತಿಳಿಯಿತು. ವಿಚಿತ್ರವೆಂದರೆ ವೈಜ್ಞಾನಿಕ ಅಧ್ಯಯನದಲ್ಲಿ ಅವರು ಕೀಟಗಳಲ್ಲಾಗಲಿ ಪಕ್ಷಿಗಳಲ್ಲಾಗಲಿ ಭೂಗೋಳದ ಮಾಹಿತಿಯನ್ನಾಗಲಿ ಪ್ರಕಟಿಸಿ ಅವುಗಳ ಪ್ರಾಮುಖ್ಯತೆಯ ಅರಿವಾಗುವ ಮುನ್ನವೆ ಈ ಪ್ರಶಸ್ತಿಗೆ ಭಾಜನರಾಗಿರುತ್ತಾರೆ. ಅಂದರೆ ಅವರು ಕೈಗೊಂಡ ಕಾರ್ಯಕ್ರಮವು ತನ್ನ ಗುರಿಯನ್ನು ಸಾಧಿಸಿತ್ತು ಎಂದರ್ಥವೆ? ಹಾಗಾದರೆ ಸ್ಕಾಫರ್ ತಂಡಕ್ಕೆ ನಿಗದಿಪಡಿಸಿದ್ದ ಗುರಿಯ ನಿಜವಾದ ರೂಪರೇಷೆ ಏನಿರಬಹುದು? ಇಲ್ಲಿ ಒಂದು ಪ್ರಶ್ನೆ ನಿನಗೆ ಎದುರಾಗಿರಬಹುದು. ಜರ್ಮನ್ನರು ಮೂಲ ಆರ್ಯರನ್ನು ಹುಡುಕಿದರೆಂದೆ ಭಾವಿಸೋಣ. ಆ ರಕ್ತವನ್ನು ಅವರು ಹೇಗೆ ತಾನೆ ಜರ್ಮನಿಗೆ ಒಯ್ಯಲು ಸಾಧ್ಯ? ಇಲ್ಲಿಯೆ ಈ ಜರ್ಮನ್ನರ ಷಡ್ಯಂತ್ರ,